ಎಂದು ಆಡಿಸ್ಯಾಡುತ್ತ ತಿಕ್ಕತೊಡಗಿದಳು. ಸೊಸೆ ಚಡಪಡಿಸತೊಡಗಿದಳು. "ಆತೆವಾ ಆತು" ಎಂದು ಸಮಾಧಾನ ಪಡಿಸುತ್ತ ಸೊಂಟದ ನರದ ಗುಂಟ ತಿಕ್ಕಿ ಒಂದು ಭಾಗದಲ್ಲಿ ಗಟ್ಟಿಯಾಗಿ ಒತ್ತಿ ಹಿಡಿದು ಅಲ್ಲಿ ಅಡಿಕೆ ಬೆಟ್ಟ ಇಟ್ಟು ಅರಿವಿಲಿಂದ ಗಟ್ಟಿಯಾಗಿ ಬಿಗಿದು ಕಟ್ಟಿ, "ಮುರಿದುಪರದು ಏನೂ ಆಗಿಲ್ಲ, ಸ್ವಲ್ಪ ಉಳುಕೇತಿ, ಹಿಡಿದು ಕಟ್ಟೇನಿ, ಎರಡು ಕೊಡ ಬಿಸಿನೀರು ಹನಿಸಿಕೋ. ಒಂದೈದು ದಿನಾ ಆಡಿನ ಹಾಲಿನ್ಯಾಗ ಒಂದೊಂದು ಗುಳಿಗಿ ನುಂಗು" ಎನ್ನುತ್ತ ಗುಳಿಗಿ ಚೀಟು ಕೊಟ್ಟಳು. ಅದೊಂದಿನ ಅಲ್ಲೆ ಇದ್ದು ರಾತ್ರಿ ಮತ್ತೊಮ್ಮೆ ತಿಕ್ಕಿ ಕಟ್ಟಿ, ಬಿಸಿನೀರು ಹನಿಸಿದಳು. ಮಾರನೆ ದಿನ ಬೆಳಿಗ್ಗೆ ಅದೆ ರೀತಿ ಮಾಡಿ ಊರಿಗೆ ಹೊರಟಳು. ಸೊಸಿ ಎದ್ದು ಕುಂತದ್ದು ನೋಡಿ ಖುಷಿಯಾದ ಸಾಹುಕಾರ ಎರಡು ಚಿಟ್ಟಿ ಜ್ವಾಳ, ಗೋಧಿ, ಅಕ್ಕಡಿ ಕಾಳು ಚೀಲದಾಗ ಕಟ್ಟಿ ಆಳಿನ ಕಡಿಂದ ಗಾಡ್ಯಾಗ ಇಡಿಸಿ ಕಳಿಸಿದ. "ನೀ ನನಗ ಒಜ್ಜೆ ಮಾಡತೀಪಾ ಸಾವಕಾರ" ಎಂದಳು.

ತಾ ಕಲಿತ ವಿದ್ಯಾ ಜನರ ಒಳಿತಿಗಾಗಿ ಬಳಕೆ ಮಾಡುತ್ತ ಜನಾನುರಾಗಿ ಆಗಿದ್ದಳು. ಸುತ್ತ ಹತ್ತು ಹಳ್ಳಿಯೊಳಗೂ ನಾಲ್ಕು ಜನರ ಬಾಯಾಗ ಇದ್ದಳು. "ಅತ್ತಿ ಈ ಸಲ ಎಮ್ಮೆಲ್ಲೆ ಎಲೆಕ್ಷನ್‌ಗೆ ನಿಂತರ ಗ್ಯಾರಂಟಿ ಆರಿಸಿ ಬರತಿ ನೋಡು" ನಿಂಗರಾಜ ಆಡಿಸ್ಯಾಡತಿದ್ದ. ಆಗ ಅತ್ತಿ, "ಅಂಥಾದೆಲ್ಲ ನನಗ್ಯಾಕ ಬೇಕೊ ಖೋಡಿ? ನೀ ನಿಂದರ ನಿನ್ನ ತರಫಿ ಪ್ರಚಾರ ನಾ ಮಾಡತೇನಿ" ಎಂದಿದ್ದಳು. ಹಗಲೆಲ್ಲಾ ತನಗ ಬೇಕಾಗುವ ವನಸ್ಪತಿ ಹುಡುಕಿಕೊಂಡು ಗುಡ್ಡ ಗುಡ್ಡಾ ಅಲಿಯುತ್ತಿದ್ದಳು. ಎಷ್ಟೊ ಸಲ ನಿಂಗರಾಜನೂ ಅವಳ ಸಂಗಾಟ ಹೋಗತಿದ್ದ. ವಯಸ್ಸು ಮೂರಿಪ್ಪತ್ತಾ ಹತ್ತು ಆಗಿದ್ದರೂ ಅವಳ ಬೆನ್ನು ಹತ್ತಲು ಅವನಿಗೆ ಆಗುತ್ತಿರಲಿಲ್ಲ. ತೇಕುತ್ತ ಗಿಡದ ನೆರಳಿಗೆ ಕುಳಿತರೆ, "ಏನು ಹರೇನೊ ನಿಂದು, ಹರೆವ ಒಯ್ದು ಹಳ್ಳದಾಗ ಹುಗೀಲಿ" ಅಂತ ಆಡಸ್ಯಾಡತಿದ್ದಳು. ಅವಳ ಕೈ ಗುಣ ಅಷ್ಟೇ ಅಲ್ಲ ಮಾರಿ ಗುಣ, ಮಾತಿನ ಗುಣಾನೂ ಛೊಲೊ ಅದಾವು. ಅದಕ್ಕೆ ಅವಳು ಏನೆ ಅನ್ನಲಿ, ಆಡಲಿ, ಬೈಯಲಿ ಸಿಟ್ಟೇ ಬರೂದಿಲ್ಲ, ಪಕ್ಕಂಥ ನಕ್ಕು ಬಿಡತಾರು.

ಮೆಟ್ಟರು, ಹೊಟ್ಟೆ ಕಡಿತ ಬಂದರೆ ನಮ್ಮೂರ ಸಣ್ಣ ಹುಡುಗರು ದವಾಖಾನೆಗೆ ಹೋಗದೆ ದಾನಮ್ಮತ್ತಿ ಕಡೆ ಹೋಗುತ್ತಾರೆ. ಅವಳ ಮನೆಯಲ್ಲಿ ದಗ್ಗು ದುಳಿಯುತ್ತ, "ಅತ್ತಿ ಅತ್ತಿ ನನಗ ಮೆಟ್ಟರು ಆಗೇತಿ, ಏನೂ ನುಂಗಾಕ ಬರವಾತ್ತು" ಒಬ್ಬನೆಂದರೆ, "ಅತ್ತಿ ನನಗ ಸಂಡಾಸ ಹಿಡದೈತಿ, ಹೊಟ್ಟಿನೂ ಬಾಳ ಕಡಿತೈತಿ" ಮತ್ತೊಬ್ಬ ಎನ್ನುವನು. ಹುಡುಗರ ಜೋಡಿ ತಾನೂ ಹುಡುಗಿ ಆಗಿ ಹುಡುಗಾಟಿ ಮಾಡುತ್ತ, "ಖೊಬ್ಬರಿ ಎಣ್ಣಿ ಏನು ನಿಮ್ಮ ಅಪ್ಪ ತರತಾನು?" ಈಗಿನ ಹುಡುಗರೂ ಬಹಳ ಬೆರಕಿ. "ನಾವೇನು ಸಣ್ಣ ಹುಡುಗರು, ನಾಲ್ಕು ಹನಿ ನಿನ್ನ ಮನ್ಯಾಗಿಂದ ತುಗೋಲಾ, ಎಷ್ಟು ಜೀನತನಾ ಮಾಡತೀ ಅತ್ತಿ" ಒಬ್ಬನೆಂದಾಗ ಉಳಿದವರು ನಗಲು ಸುರುಮಾಡುವರು. ಅವರ ಜೊತೆ ತಾನೂ ನಗುತ್ತ, ನೆಟಗಿ ಮುರಿದು ಬೆಲ್ಲ ಕೊಡುವಳು. ಮೆಟ್ಟರು ಆದವನಿಗೆ ಗಂಟಲು ಹಾಗೂ ಮುಂಗೈ ಮೇಲ್ಭಾಗದಲ್ಲಿ ಎಣ್ಣೆ ಹಚ್ಚಿ ತಿಕ್ಕುತ್ತ, ''ಇಲ್ಲಿಗ್ಯಾಕ ಬಂದಿ... ಹಾದಿ ತೆಪ್ಪಿ ಬಂದಿ... ಹೋಗ ನಿನ್ನ ಮನೆಗೆ...'' ಎಂದು ರಾಗವಾಗಿ ಹೇಳುತ್ತ ಕೆನ್ನೆಗೆ ಹಿತವಾಗಿ ತಟ್ಟಿ, ಬಳ್ಳೊಳ್ಳಿ ಬ್ಯಾಳಿ, ಖಟಕ ರೊಟ್ಟಿ ತಿನ್ನಲು ಹೇಳಿ, ಬೆಲ್ಲ, ಹಾಲು ಕುಡಿಯದಂತೆ ಪಥ್ಯ ಹೇಳುವಳು. ಹೊಟ್ಟೆ ಕಡಿಯುತ್ತಿದ್ದವನಿಗೆ ಎರಡೂ ಮೀನುಖಂಡ ಮತ್ತು ಹಿಮ್ಮಡದ ನರಗಳನ್ನು ತಿಕ್ಕಿ, ''ಉದರ ಬ್ಯಾಳಿ ಏನು ಊದಾಕ ತಿಂದಿ... ಮಿರ್ಚಿಭಜಿ ಏನು ಬಗ್ಗಾಕ ತಿಂದಿ... ನನ್ನ ಮುಂದೇನು ಡೊಗ್ಗಾಕ ಬಂದಿ...'' ಹಾಡುತ್ತ ಹಿಮ್ಮಡದ ಮೇಲೆ ಸಾವಕಾಶ ಮೂರು ಬಾರಿ ಗುದ್ದಿ ಖಾರಾ, ಹುಳಿ ಪದಾರ್ಥ ತಿನ್ನದಂತೆ ತಾಕೀತು ಮಾಡುವಳು. ಇದನ್ನು ನೋಡಿ ಹುರುಪಿಗೆದ್ದವನೊಬ್ಬ, "ಅತ್ತಿ ನಂದು ಕಡ್ಯಾಕ ಹತ್ತೇತಿ" ಎನ್ನುವನು. "ನಿಂದೇನು ಕಡ್ಯಾಕ ಹತ್ತೇತಿಪಾ?" ಕೇಳುವಳು. ಮುಖ ಕಿವುಚಿ, "ಗೊತ್ತಾಗವಲ್ಲದ ಅತ್ತಿ, ಬಾಳ ಕಡ್ಯಾಕ ಹತ್ತೇತಿ" ಎಂದನು. ಅವನ ಮುಂಗೈ ನರ ಹಿಡಿದು, "ಹೌದಲ್ಲಲಾ, ನಿನ್ನ ಕುಂಡಿ